SRI M. C. BASAPPA.—You have said that there is delay in commissioning. You have not said that you are generating 135 maga watts. According to experts, the first unit of Kali Nadi commissioned behind schedule is not generating the power to its installed capacity even to this day, What do you say for that ?

SRI R. GUNDU RAO.—What should I say for that ?

ಶ್ರೀ ಎಂ. ಸಿ. ಬಸಪ್ಪ.—ಇವೊತ್ತು ದೇಶದಲ್ಲಿ ವಿದ್ಯುಚ್ಛಕ್ತಿ ಇಲ್ಲದೆ ಬಹಳ ತೊಂದರೆಯಾಗಿದೆ ಹೀಗಿರುವಾಗ ಕಾಳಿ ನದಿಯ ಒಂದು ಜನರೇಟರ್ ಕೂಡ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಉತ್ಪಾದನೆ ಮಾಡುತ್ತಿಲ್ಲ. ಇದಕ್ಕೆ ಕಾರಣಗಳೇನು ?

ಶ್ರೀ ಆರ್, ಗುಂಡೂರಾವ್.—ಕಾಳಿ ನದಿಯ ಫಸ್ಟ್ ಯೂನಿಟ್ ಕೆಲಸ ನಡೆಯುತ್ತಿತ್ತು, ಆದರೆ ನಾನಾ ಕಾರಣಗಳಿಂದ ಅದು ನಿಂತು ಹೋಗಿತ್ತು. ಆದರೆ ಬಗ್ಗೆ ವಿವರಣೆ ಕೊಟ್ಟಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಯಾವ ಕಾರಣಕ್ಕಾಗಿ ಅದು ನಿಂತು ಹೋಗಿತ್ತು? ಟೆಕ್ನಿಕಲ್ ಡಿಫಿಕಲ್ಟಿಯೇ ಅಥವಾ ಅದರಲ್ಲಿ ನೀರು ಇರಲಿಲ್ಲವೇ ? ಯಾವ ಕಾರಣಕ್ಕಾಗಿ ಅದನ್ನು ನಿಲ್ಲಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮುಖ್ಯವಾಗಿ ತಾಂತ್ರಿಕ ಕಾರಣಗಳಿಂದ ಅದು ನಿಂತು ಹೋಗಿತ್ತು.

ಶ್ರೀ ಎಂ. ಸಿ. ಬಸಪ್ಪ.—ತಾಂತ್ರಿಕ ಕಾರಣ ಏನು ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ನಮಗೆ ಅಧಿಕಾರವಿಲ್ಲವೇ ? ಬೇಕಾದರೆ ನಿಮ್ಮ ಅಧಿಕಾರಿಗಳನ್ನು ಕೇಳಿ ಹೇಳಿ.

ಶ್ರೀ ಆರ್. ಗುಂಡೂರಾವ್.—ತಾಂತ್ರಿಕ ಕಾರಣಗಳು ಎಂದರೆ ಟನಲ್‌ನಲ್ಲಿ ನೀರು ಜಾಸ್ತಿ ಬಂದಿರ ಬಹುದು. ಸಿಲ್ಟ್ ತುಂಬಿಕೊಂಡು ನಿಂತು ಹೋಗಿರಬಹುದು. ಇಂಥಾ ಕಾರಣಗಳಿಂದ ಅದು ನಿಂತು ಹೋಗಿತ್ತು.

SRI M. C. BASAPPA.—Can't the Government be specific about it ? Why it is not producing power to its installed capacity ?

SRI R. GUNDU RAO.—It is because the silt has accumulated in he tunnel and the flood has come with the result it has not been possible to operate it.

Janatha Houses in Faratabad Hobli of Gulbarga District

327. SRI S.F. BHAIRI (Shahabad), SRI B.V. KAKKILAYA (Vittal).—Will the Minister for Housing and Urban Development be pleased to state.—

(a) the number of Janatha Houses constructed upto the end of 1977-78 in the villages of Faratabad Hobli of Gulbarga Taluk;

(b) the number of Janatha Houses sanctioned for these villages in 1978-79;

(c) if no Janatha Houses have been sanctioned or built in these villages, the reason for the same?

SRI DHARM SINGH (Minister for Housing and Urban Development)

(a) 118

(b) 87

(c) Does not arise in view of replies to clauses (a) and (b) above.

ಶ್ರೀ ಎಸ್.ಎಫ್. ಭೈರಿ.—ಸ್ವಾಮಿ ಗುಲ್ಬರ್ಗಾ ಜಿಲ್ಲೆಯ ಫರುತಾಬಾದ್ ಹೋಬಳಿಯಲ್ಲಿ ೪೩-೪೪ ಹಳ್ಳಿಗಳಿವೆ. ಈ ಗ್ರಾಮಗಳಲ್ಲಿ ೧೯೭೭-೭೮ರ ಆಂತ್ಯದವರೆಗೆ ೧೧೮ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದ್ದೀರಿ. ಆಮೇಲೆ ೧೯೭೮-೭೯ನೇ ಸಾಲಿನಲ್ಲಿ ಈ ಗ್ರಾಮಗಳಿಗೆ ೮೭ ಜನತಾ ಗೃಹಗಳು ಮಂಜೂರಾಗಿವೆ ಎಂದು ಹೇಳಿದ್ದೀರಿ, ಹಾಗಾದರೆ ಯಾವ ಯಾವ ಹಳ್ಳಿಯಲ್ಲಿ ಎಷ್ಟೆಷ್ಟು ಮನೆಗಳನ್ನು ನಿರ್ಮಿಸಿದ್ದಾರೆ, ಮತ್ತು ಯಾವ ಯಾವ ಹಳ್ಳಿಗಳಿಗೆ ಎಷ್ಟೆಷ್ಟು ಮನೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಧರ್ಮಸಿಂಗ್.—ಫರುತಾಬಾದ್ ಹೋಬಳಿಯಲ್ಲಿ ಸುಮಾರು ೨೫ ಹಳ್ಳಿಗಳಿವೆ. ಇದರಲ್ಲಿ ಒಂದು ಸರ್ಕಲ್‌ನಲ್ಲಿ ಈಗಾಗಲೇ ೯ ಹಳ್ಳಿಗಳಲ್ಲಿ ೨೦೫ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಫರತಾಬಾದ್ ೫೫ ಮನೆಗಳು, ಟಾಡ್‌ತೆಂಜೂರ್ ೫ ಮನೆಗಳು, ಫರೋಡಾಬಾದ್ ೬ ಮನೆಗಳು, ಕೀರಂಗಿ ೩೫ ಮನೆಗಳು, ಟಿಲ್‌ಗೋಳೆ ೧೫ ಮನೆಗಳು, ಹೀಗೆ ಒಟ್ಟು ೧೧೮ ಮನೆಗಳನ್ನು ಕಟ್ಟಿಸಿಕೊಟ್ಟಿದೆ. ಮಂಜೂರಾಗಿರುವ ಮನೆಗಳು ಹಗರ್‌ಗುಂಡ್ ೪ ಮನೆಗಳು, ಕಾವಾಡಗೋ ೧೫ ಮನೆಗಳು, ಫರೋಜಾಬಾದ್ ೧೫ ಮನೆಗಳು, ಕಿರಾಂಗಿ ೧೨ ಮನೆಗಳು, ತಿಲ್‌ಗೋಳೆ ೧೧ ಮನೆಗಳು, ಕಂಡಾಲ್ ೧೫ ಮನೆಗಳು ಹೀಗೆ ಒಟ್ಟು ೮೭ ಮನೆಗಳು ಮಂಜೂರಾಗಿವೆ. ಈ ರೀತಿ ಇಲ್ಲಿಯವರೆಗೆ ೯ ಹಳ್ಳಿಗಳಲ್ಲಿ ೨೦೫ ಮನೆಗಳನ್ನು ಕಟ್ಟಿಸಿದ್ದೇವೆ.

ಶ್ರೀ ಎಸ್.ಎಫ್. ಭೈರಿ.—ಸ್ವಾಮಿ, ಉಳಿದ ಹಳ್ಳಿಗಳಲ್ಲಿ ಗೃಹನಿರ್ಮಾಣ ಯೋಜನೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಈ ವರ್ಷದ ಬಜೆಟ್ಟಿನಲ್ಲಾದರೂ ಹಣ ಒದಗಿಸಿ ಮನೆಗಳನ್ನು ಕಟ್ಟಿಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ಹೋದ ವರ್ಷ ಗುಲ್ಬರ್ಗ ಜಿಲ್ಲೆಯಲ್ಲಿ ೩೫೫೦ ಮನೆಗಳನ್ನು ಕಟ್ಟಿದ್ದೇವೆ. ಗುಲ್ಬರ್ಗ ತಾಲ್ಲೂಕಿನಲ್ಲಿ ೧೦೮೧ ಮನೆಗಳನ್ನು ಕಟ್ಟಿದ್ದೇವೆ. ಈ ವರ್ಷ ಸುಮಾರು ಒಂದು ಲಕ್ಷ ಮನೆಗಳನ್ನು ಕಟ್ಟಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಇದಲ್ಲದೆ ಎಲ್ಲೆಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಅವಶ್ಯಕತೆ ಇದೆ ಎಂದು ಸರ್ವೆ ಮಾಡಿಸಿ ಅದರಂತೆ ಹೆಚ್ಚು ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ. ಆದರಲ್ಲಿ ನಿಮ್ಮ ಗುಲ್ಬರ್ಗ ಜಿಲ್ಲೆಯೂ ಬರುತ್ತದೆ.

Closing of Arrack Shop at Gandhinagar, Bangalore

377 SRI M.H. BEKINALKAR (Sindgi).—Will the Chief Minister be pleased to state.—

(a) whether representation from the Public of Bangalore to close the Arrack Shops by the side of Volga Hotel in 6th Main Gandhinagar Bangalore have been received;

(b) whetner Government is aware that there is a Mosqae nearby, and School in the front ?

SRI R. GUNDU RAO (Chief Minister).—

(a) A representation has been received during 1979. The Arrack shop is in existence at the Present location since 1973-74,

(b) Yes.